# ಅಲೆಗ್ಸಾಂಡರ ಸಂದೇಶ



ಕಲೆ ಮತ್ತು ಸಾಹಿತ್ಯ : ಪುರುಷೋತ್ತಮ ಕಾರಂತ

**ಜಗ**ದ್ವಿಖ್ಯಾತ ವೀರ ಮೇಧಾವಿ ಚಕ್ರವರ್ತಿ
ಅಲೆಗ್ಸಾಂಡರನು ದುಃಖಿಸುತಲಿದ್ದನಂದು
'ಇನ್ನಾವ ರಾಜ್ಯವ ಗೆಲ್ಲಲಿ ಈ ಜಗದೊಳಗೆ' ಎಂದು.

**ಗೆಳೆಯ**ರೆಂದರು, 'ದೊರೆಯೇ,
ಇನ್ನಷ್ಟು ದೇಶ ಕೋಶಗಳಿವೆ ಧೀರ,
ಬಂಗಾರದ ಭಾರತವಿದೆ'– ಎಂದು.

**ದಿಗ್ವಿಜಯ**ಗೊಂಡು–
ಭಾರತದ ಪೋರಸನ ಗೆದ್ದು
ಮರಳುತಿದ್ದನು ನಿಜಪುರಕೆ–ಚಕ್ರವರ್ತಿ
.... ಗುಣವ ಕಾಣದ ರೋಗದಿಂದ
ಮರಣೋನ್ಮುಖನಾದನಾ ಖಲಿ!

**ಕರೆದು** ತನ್ನಾಪ್ತರನ್ನೊಂದು ದಿನ,
'ವೀರರೇ, ನನ್ನನುಳಿಸಲಾರಿರಿ ನೀವು ಇನ್ನೆಂದೂ,
ನಡೆಸುವಿರಾ ನನ್ನ ಕೊನೆಯಾಸೆಯೊಂದು–'
'ಅಪ್ಪಣೆಯು ದೊರೆಯೇ–ಏನಗೈಯಲು ಬೇಕು'
ಎನಲು ಒಗ್ಗೊರಲಿನಲಿ ವೀರಯೋಧರ ದಂಡು–

**'ನನ್ನ** ಮರಣದ ಬಳಿಕ ಶವಯಾತ್ರೆ ಗೈಯಬೇಕು
ನನ್ನೆರಡು ಬರಿಗೈಗಳನು ತೆರೆದು ಹೊರಗಿಡಬೇಕು!

**ಅರ್ಧ**ಜಗವನೆ ಗೆದ್ದ ವೀರಾಧಿವೀರ
ಚಕ್ರವರ್ತಿ ಅಲೆಗ್ಸಾಂಡರನು
ತನ್ನೊಡನೆ ಕೊಂಡೊಯ್ಯಲಿಲ್ಲ ಏನೇನೂ–
ತಿಳಿಯಲೀ ಸತ್ಯ– ಇಡೀ ಪ್ರಪಂಚ'!

**ಭಗವಂತ**ನು ನಮಗೆ ಈ ಪ್ರಪಂಚದಲ್ಲಿ ಎಲ್ಲವನ್ನೂ ಕೊಟ್ಟಿದ್ದಾನೆ. ಆನಂದದಿಂದ ಅನುಭವಿಸಬೇಕು. ಆದರೆ ಯಾವುದನ್ನೂ 'ನನ್ನದು' ಎನ್ನಕೂಡದು. ಸಿಕ್ಕಿದ ಎಲ್ಲಕ್ಕೂ 'ನಮ್ಮ' ಮುದ್ರೆಯೊತ್ತಿಕೊಂಡು ಭ್ರಾಂತಿಯಿಂದ ಅಂಟಿಕೊಂಡು ಬಾಳುತ್ತೇವೆ. ಆದರೆ ಒಂದು ದಿನ ಇದಾವುದನ್ನೂ ನಮ್ಮೊಡನೆ ಇರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ನಮ್ಮ ಜನ್ಮ, ತಂದೆ-ತಾಯಿ, ದೇಶ, ನೆಲ ಯಾವುದನ್ನೂ ನಾವು ಆಯ್ಕೆ ಮಾಡಲಾಗುವುದಿಲ್ಲ. ಎಲ್ಲವೂ ಭಗವಂತನಿಂದ ಕೊಡಲ್ಪಡುವುದೆಂದಮೇಲೆ 'ನನ್ನ' ಮುದ್ರೆ ಯಾಕೆ? ❑